ಬೆಳಗ್ಗೆ ಬಂದು ಹಿಸ್ಟರಿ ಬರೆಸಲು ಹೇಳಿದೆ. ಮೂರು ದಿನಗಳ ನಂತರ ನನಗೂ ಆಶ್ಚರ್ಯ ಕಾದಿತ್ತು. ಅವಳು ಇತರ ಎಲ್ಲ ಮಹಿಳೆಯರಂತೆಯೇ ಉಡುಪು ಧರಿಸಿ ಬಂದಿದ್ದಳು. ಮೂರು ದಿನಗಳಲ್ಲಿ ಇಂತಹ ವ್ಯತ್ಯಾಸ ಸಾಧ್ಯವೇ ಎಂದು ನನಗನ್ನಿಸಿದರೂ, ಅದು ಸತ್ಯ. ಅವಳ ಕೇಸ್ ಹಿಸ್ಟರಿ ಪಡೆಯುವ ಮೊದಲೇ ಪ್ರಯೋಗಿಸಿದ ಔಷಧಿ ನನ್ನ ಅನುಮಾನಗಳನ್ನು ಬಲಪಡಿಸಿತ್ತು.

ಜೀವನದಲ್ಲಿ ಕಂಡು ಬಂದ ಬದಲಾವಣೆಯಿಂದ ಚೇತರಿಸಿಕೊಳ್ಳದಿರುವಿಕೆ, ಸದಾ ಖಿನ್ನತೆಯ ಮನೋಸ್ಥಿತಿ, ಆಲಸ್ಯ, ದೀರ್ಘಾವಧಿಯ ದುಃಖ, ಭಯ, ಅಸೂಯೆ, ನಿರಾಶೆ ಇವೇ ಮೊದಲಾದ ಮಾನಸಿಕ ಸಮಸ್ಯೆಗಳಿರುವ ವ್ಯಕ್ತಿಗಳಲ್ಲಿ ಇಂಥ ಲಕ್ಷಣಗಳಿರುತ್ತವೆ. ಸ್ಪರ್ಶಕ್ಕೆ ಅತಿಯಾದ ಸಂವೇದನೆ ಹೊಂದಿರುತ್ತಾರೆ. ಈ ಕಾರಣದಿಂದಲೇ ಕತ್ತು, ಹೊಟ್ಟೆ, ಸೊಂಟ, ಕಿಬ್ಬೊಟ್ಟೆಗೆ ತಗುಲಿಕೊಳ್ಳುವಂಥ ಬಿಗಿ ಉಡುಪನ್ನು ಅವರು ಇಷ್ಟಪಡುವುದಿಲ್ಲ. ಬಿಗಿ ಉಡುಪುಗಳಿಂದ ಸಣ್ಣಪುಟ್ಟ ತರಚು ಗಾಯಗಳಾಗಬಹುದು ಎನ್ನುವ ಭಯ ಇದಕ್ಕೆ ಕಾರಣವಲ್ಲ. ಇದರಿಂದ ಏನೋ ಒಂದು ತರಹದ ಅಹಿತ, ಅಸಹನೆ ಉಂಟಾಗುವುದರಿಂದ ಇಂಥ ಬಟ್ಟೆಗಳನ್ನು ಉಡುಪುಗಳೆಂದರೆ ಕಿತ್ತೆಸೆಯುತ್ತಾರೆ. ಸಹಜವಾಗಿಯೇ ರಾತ್ರಿಯಲ್ಲಿ ಧರಿಸುವ ಉಡುಪುಗಳೆಂದರೆ ಇಂಥವರಿಗೆ ಕಿರಿಕಿರಿ. ಹೋಮಿಯೋಪತಿ ಔಷಧಿಯ ತಯಾರಿಕೆ ಮತ್ತು ವಿನಿಯೋಗ ವಿಶಿಷ್ಟವಾದದ್ದು. ಹಾವಿನ ವಿಷವನ್ನು ಹೋಮಿಯೋಪತಿ ಔಷಧ ರೂಪದಲ್ಲಿ ಅಂದರೆ ಅತಿವಿರಳೀಕರಣ ಹಾಗೂ ಸಿದ್ಧೀಕರಣಗೊಳಿಸಿದ ನಂತರ ಆರೋಗ್ಯವಂತ ವ್ಯಕ್ತಿಯ ಮೇಲೆ ಪ್ರಯೋಗ ಮಾಡಿರುತ್ತೇವೆ. ಈ ಪ್ರಯೋಗಕ್ಕೆ ಒಳಗಾದವರು ಹಾವು ಕಡಿದು, ವಿಷಪೂರಿತ ವ್ಯಕ್ತಿ ವ್ಯಕ್ತಪಡಿಸುವ ಹಲವಾರು ಲಕ್ಷಣಗಳನ್ನು ಹೊರ ಹಾಕುತ್ತಾರೆ.

ಅವಳು ಮಾರ್ವಾಡಿ ಕೂಡು ಕುಟುಂಬದ ಸೊಸೆಯಾಗಿದ್ದಳು. ಯಾವುದೇ ಸ್ವಾತಂತ್ರ್ಯ ಅವಳಿಗಿರಲಿಲ್ಲ. ಯಾವುದೇ ವಿಚಾರವಾದರೂ ಅತ್ತೆಯದೇ ಸರ್ವಾಧಿಕಾರ. ಮನೆಯಲ್ಲಿದ್ದ ಇತರರಿಂದಲೂ ಮಾನಸಿಕ ದೌರ್ಜನ್ಯ. ನಾವು ಕಾಲಿನಿಂದ ತುಳಿಯುವ ಇರುವೆ ಕೂಡಾ ತಿರುಗಿ ನಿಲ್ಲುತ್ತದೆ. ನೆಲಕ್ಕೆ ಎಸೆದ ಚೆಂಡು ಪುಟಿದು ಮೇಲೆ ಬರಲೇಬೇಕಲ್ಲಾ? ಆತ್ಮಗೌರವ ಇದ್ದ ಈ ಹೆಣ್ಣುಮಗಳು ಯಾವುದೇ ದೌರ್ಜನ್ಯ ಸಹಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಬೇರೆ ಮನೆ ಮಾಡಿ ಸಂಸಾರ ಹೂಡಬೇಕೆಂದು ಹಠ ಹಿಡಿದಿದ್ದರೂ ಅದು ಗಂಡನಿಗೆ ಸಾಧ್ಯವಿರಲಿಲ್ಲ. ಅದು ಕೂಡು ಕುಟುಂಬವಷ್ಟೇ ಆಗಿರದೆ, ಇಡೀ ಕುಟುಂಬ ವ್ಯವಹಾರವನ್ನೂ ಒಗ್ಗೂಡಿಯೇ ನಡೆಸುತ್ತಿತ್ತು.

ಅವಳ ಅಂತರಂಗದ ನೋವನ್ನೆಲ್ಲ ಹೊರ ತೆಗೆಯುವ ನನ್ನ ಅಸ್ತ್ರಗಳು ಸಮರ್ಪಕವಾಗಿಯೇ ಕಾರ್ಯ ನಿರ್ವಹಿಸುತ್ತಿದ್ದವು. ಇದರ ಪರಿಣಾಮ ಆಕೆಗೆ ನನ್ನ ಮೇಲೆ ವಿಶ್ವಾಸ ಹುಟ್ಟಿತ್ತು. ನನ್ನ ಜತೆ ಮನಬಿಚ್ಚಿ ಮಾತನಾಡಲಾರಂಭಿಸಿದ್ದಳು. "ಡಾಕ್ಟ್ರೇ, ಇಂತಹ ದೌರ್ಜನ್ಯ ನಡೆಸುವ ವಂಶ ಮುಂದುವರಿಯಬೇಕೇ?" ಎಂದು ಅವಳು ಕೇಳಿದ ಪ್ರಶ್ನೆ ನನಗೆ ಅಚ್ಚರಿ ಉಂಟು ಮಾಡಿರಲಿಲ್ಲ. ನನ್ನ ಔಷಧ ಪ್ರಯೋಗ ಸರಿ ಇತ್ತು. ನಾನು ಸುರುಕುಕೂ ಹಾವಿನ ವಿಷದಿಂದ ಮಾಡಿದ ಔಷಧ ಕೊಟ್ಟಿದ್ದೆ. ಈಕೆಯ ಭಾವ ಚಿತ್ರಣಕ್ಕೆ ಸುರುಕುಕೂ ವಿಷದಿಂದ ತಯಾರಿಸಿದ ಔಷಧ ಸರಿ ಹೊಂದುತ್ತಿತ್ತು. ಈ ಮನೋಸ್ಥಿತಿಯ ವ್ಯಕ್ತಿಗಳು ತಮ್ಮ ಮೇಲೆ ಯಾರೂ ಅಧಿಕಾರ ನಡೆಸುವುದಕ್ಕೆ ಅವಕಾಶ ನೀಡುವುದಿಲ್ಲ. ತಮ್ಮನ್ನು ತಾವು, ಅತಿಮಾನವರೆಂದು ದೈವಿಕ ಗುಣವುಳ್ಳವರೆಂದು ತಿಳಿದು ಅತಿಮಾನುಷ ಶಕ್ತಿ ಉಳ್ಳವರಂತೆ ಆಡುತ್ತಾರೆ.

ಈ ಔಷಧಿ ಪ್ರಯೋಗ, ಮೂರು ದಿನಗಳಲ್ಲಿ ಅವಳು ಬಟ್ಟೆ ಹಾಕಿಕೊಳ್ಳುವಂತೆ ಮಾಡಿದ್ದಲ್ಲದೆ, 9 ತಿಂಗಳು ತನ್ನ ಗರ್ಭವನ್ನು ಮುಂದುವರಿಸಿ ಸಹಜ ಹೆರಿಗೆಯ ಮೂಲಕ ಒಂದು ಗಂಡು ಮಗುವಿನ ತಾಯಿಯಾಗುವುದಕ್ಕೆ ನೆರವಾಯಿತು. ಪ್ರಸವದ ದಿನದವರೆಗೂ ನಾನು ಈ ಔಷಧಿಯನ್ನು ಮುಂದುವರಿಸಿದ್ದೆ.

ಜೀವನ ಕಟ್ಟುಕಥೆಗಿಂತ ಭಿನ್ನವಾಗಿರುತ್ತವೆ ಎನ್ನುವುದು ಲಕ್ಷಾಂತರ ರೋಗಿಗಳನ್ನು ನೋಡಿರುವ ನನಗೆ ಮನದಟ್ಟಾಗಿದೆ. ನಮ್ಮಲ್ಲಿ ಪುನರಾವರ್ತಿತ ಗರ್ಭಪಾತ ತಡೆಗೆ ಹಲವಾರು ಔಷಧಿಗಳಿವೆ. ಮೊದಲನೇ ತಿಂಗಳಲ್ಲಿ ಆಗುವುದಕ್ಕೆ, ಗರ್ಭ ಧರಿಸಿದ ಮೂರನೇ ತಿಂಗಳಲ್ಲಿ ಆಗುವುದಕ್ಕೆ, ಐದನೇ ತಿಂಗಳಲ್ಲಿ ಆಗುವುದಕ್ಕೆ ಹೀಗೆ ಯಾವುದೇ ರೀತಿಯ ಗರ್ಭಪಾತ ನಿಲ್ಲಿಸಲು ಹೋಮಿಯೋಪತಿಯಲ್ಲಿ ಔಷಧಿ ಇದೆ. ಭಯ, ಆಘಾತ, ವಿಪರೀತ ದುಃಖ, ಇವುಗಳೆಲ್ಲದರ ದುಷ್ಪರಿಣಾಮವಾಗಿ ಗರ್ಭಪಾತವಾಗುವ ಸನ್ನಿವೇಶ ಇರುತ್ತದೆ. ಅದಕ್ಕೆ ಬೇರೆ ಔಷಧಿಗಳಿವೆ. ಹೆಣ್ತನದ ಸಂಕೇತವಾದ ತಾಯ್ತನ ಕರುಣಿಸಲು ಹೋಮಿಯೋಪತಿಯಲ್ಲಿ ಹೆಣ್ಣನ್ನು 360 ಡಿಗ್ರಿಗಳಲ್ಲೂ ಅರ್ಥ ಮಾಡಿಕೊಂಡು, ಅದಕ್ಕೊಂದು ಔಷಧ ಪ್ರಯೋಗ ಮಾಡುವುದು ಹೋಮಿಯೋಪತಿಯ ವೈಶಿಷ್ಟ್ಯ.

"ಹೆಣ್ಣು ಕುಟುಂಬದ ಪ್ರಮುಖ ಭಾಗ, ಎಲ್ಲರಷ್ಟೇ ಸಮಾನಳು" ಎನ್ನುವ ಮನೋಭಾವ ಎಲ್ಲರಲ್ಲೂ ಮೂಡಬೇಕು. ಆದರೆ ಹೆಣ್ಣಿನ ಬಗ್ಗೆ ತೋರುವ ತಾರತಮ್ಯ, ನಿರ್ಲಕ್ಷ್ಯ ಧೋರಣೆ ಇಂಥ ಮಾನಸಿಕ ಸಮಸ್ಯೆಗಳನ್ನು ಹುಟ್ಟು ಹಾಕುತ್ತವೆ. ಇದು ದೇಹದ ಮೇಲೂ ಪರಿಣಾಮ ಬೀರುತ್ತದೆ. ಈ ಪ್ರಕರಣದಲ್ಲೂ ಅಷ್ಟೇ, ಹೆಣ್ಣಿನ ಮನೋಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೇ ಆಕೆಗೆ ಬಟ್ಟೆ ಸರಿ ಹಾಕಿಕೊಳ್ಳುವಂತೆ ಗದರಿ ಕಳಿಸಿದ್ದರೆ ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ಹೋಗುತ್ತಿತ್ತು. ಆಕೆ ಯಾಕೆ ಹಾಗೆ ಮಾಡುತ್ತಿದ್ದಾಳೆ ಎನ್ನುವುದರ ಮೂಲ ಕಾರಣಗಳನ್ನು ತಿಳಿದು ಅದಕ್ಕೆ ಪರಿಹಾರ ಹುಡುಕಬೇಕೇ ಹೊರತು ಬಾಹ್ಯ ಲಕ್ಷಣಗಳಿಗೆ ಔಷಧ ಕೊಡುವುದೋ, ಬಾಯಿ ಮಾತಿನ ಉಪಚಾರವೋ ಸಾಕಾಗುತ್ತಿರಲಿಲ್ಲ. ಇದನ್ನೇ ನಾನು ಅಂತರಂಗ ಪ್ರವೇಶ ಎನ್ನುತ್ತೇನೆ. ಇದು ಪರಕಾಯ ಪ್ರವೇಶ ಅಲ್ಲ. ಎಕ್ಸ್ ರೇ ದೇಹದ ಒಳಭಾಗಗಳ ಚಿತ್ರಗಳನ್ನು ತೋರಿಸಿದರೆ ನಮ್ಮ ಚಿಕಿತ್ಸಕ ಮನಸ್ಸು ರೋಗಿಯ ಅಂತರಂಗದ ಸ್ಥಿತಿಯನ್ನು ಅರಿತುಕೊಳ್ಳಬೇಕು. ಆಗ ಮಾತ್ರ ಪರಿಹಾರ ಸಾಧ್ಯ.■

# ಗರ್ಭಿಣಿ ಆದ ತಕ್ಷಣ ಮೈ ಮೇಲಿನ ಬಟ್ಟೆ ಕಿತ್ತೆಸೆಯುವುದು ಆಕೆಯ ಚಾಳಿಯಾಗಿತ್ತು!.

■ ಡಾ. ಬಿ.ಟಿ.ರುದ್ರೇಶ್



"No woman can call herself free until she can choose consciously whether she will or will not be a mother."

**Margaret Sanger**

[An American sex educator]

**ಜೀವನದಲ್ಲಿ ಕಂಡು ಬಂದ ಬದಲಾವಣೆಯಿಂದ ಚೇತರಿಸಿಕೊಳ್ಳದಿರುವಿಕೆ, ಸದಾ ಖಿನ್ನತೆಯ ಮನೋಸ್ಥಿತಿ, ಆಲಸ್ಯ, ದೀರ್ಘಾವಧಿಯ ದುಖಃ, ಭಯ, ಅಸೂಯೆ, ನಿರಾಶೆ ಇವೇ ಮೊದಲಾದ ಮಾನಸಿಕ ಸಮಸ್ಯೆಗಳಿರುವ ವ್ಯಕ್ತಿಗಳಲ್ಲಿ ಇಂಥ ಲಕ್ಷಣಗಳಿರುತ್ತವೆ.**

ಕೆಲವು ಸತ್ಯ ಸಂಗತಿಗಳು ಕಾಲ್ಪನಿಕ ಅನ್ನುವಷ್ಟು ವಿಚಿತ್ರವಾಗಿರುತ್ತವೆ. ನಾನು ಇಲ್ಲಿ ಹೇಳುತ್ತಿರುವ ಪ್ರಕರಣವನ್ನೂ ನೀವು ಇದೊಂದು ಕತೆ ಎಂದುಕೊಂಡರೆ ಅಚ್ಚರಿ ಇಲ್ಲ. ಅದೊಂದು ರಾತ್ರಿ ಕೆಲಸ ಮುಗಿದ ನಂತರ ನಾನು ಕ್ಲಿನಿಕ್‌ನಿಂದ ಇನ್ನೇನು ಹೊರಡುವವನಿದ್ದೆ, ಅದಾಗಲೇ, 100 ರಿಂದ 120 ರೋಗಿಗಳನ್ನು ನೋಡಿಯಾಗಿತ್ತು. ಬಾಗಿಲ ಬಳಿ ಬಂದಿದ್ದ ನನ್ನಲ್ಲಿ ಇನ್ನ್ಯಾರನ್ನೂ ನೋಡುವ ಮನಸ್ಥಿತಿ ಇರಲಿಲ್ಲ. ಆ ಹೊತ್ತಿಗೆ ನಮ್ಮ ಕ್ಲಿನಿಕ್ ಇರುವ ರಸ್ತೆಯ ನಾಲ್ಕೈದು ಮಾರ್ವಾಡಿ ವ್ಯಾಪಾರಿಗಳು ನನ್ನ ಬಳಿ ಬಂದರು. ಸಾರ್ ಒಂದು ನಿಮಿಷ ಅಂದರು. ಇದೆಲ್ಲಾ ಒಂದು ನಿಮಿಷದಲ್ಲಿ ಆಗಲ್ಲ, ಯಾಕೆ ಇಷ್ಟು ಹೊತ್ತಿನಲ್ಲಿ ಬರುತ್ತಿದ್ದೀರಿ ಅಂದೆ. ಅದಕ್ಕವರು, ಸಾರ್ ಇದು ಯಾರೂ ಇಲ್ಲದ ಹೊತ್ತಿನಲ್ಲಿ ಬರಬೇಕಾದ ಕೇಸ್, ಅದಕ್ಕೆ ಇಷ್ಟು ಹೊತ್ತಿನಲ್ಲಿ ಬಂದಿದ್ದೀವಿ ಅಂದ್ರು, ಏನ್ರಿ ಅಂತಾದ್ದು ಅಂದೆ. ಬನ್ನಿ ಸಾರ್ ಒಳಗೆ ಹೇಳ್ತಿವಿ ಅಂದ್ರು, ಅವರು ತಮ್ಮ ಸೊಸೆಯನ್ನು ಒಳಗೆ ಕರೆದುಕೊಂಡು ಬಂದರು. ನನಗೆ ಅವರ ನಡವಳಿಕೆಗಳೇ ವಿಚಿತ್ರವಾಗಿ ಕಾಣಲಾರಂಭಿಸಿದವು.

ಆ ಮಹಿಳೆಗೆ ಸೀರೆಯೊಂದನ್ನು ಸುತ್ತಿ ನನ್ನ ಬಳಿ ಕರೆತಂದಿದ್ದರು. ಏನ್ರೀ ಇದು ಅಂದೆ, ಸಾರ್ ಅವ್ರು ಪ್ರೆಗ್ನಂಟ್ ಅಂದ್ರು, ಇದೇನು ಈ ಸ್ಥಿತಿಯಲ್ಲಿ ಎಂದು ಪ್ರಶ್ನಿಸಿದೆ. ಅದೇ ಸಾರ್ ಕೇಸು ಎಂದರು. "ಇದುವರೆಗೂ ಅವಳಿಗೆ 9 ಬಾರಿ ಅಬಾರ್ಷನ್ ಆಗಿದೆ. ಪ್ರತಿ ಸಾರಿ, ಗರ್ಭಿಣಿಯಾಗುತ್ತಿದ್ದಂತೆಯೇ ಅವಳು ತನ್ನ ಮೈಮೇಲೆ ಯಾವುದೇ ಬಿಗಿ ಉಡುಪುಗಳನ್ನು ಸಹಿಸುವುದಿಲ್ಲ, ಎಲ್ಲ ಒಳಉಡುಪುಗಳನ್ನು ತೆಗೆದುಹಾಕುತ್ತಾಳೆ. ಮನೆಯಲ್ಲಂತೂ ಯಾವುದೇ ಬಟ್ಟೆ ಇಲ್ಲದಂತೆ ಇರಲು ಕೂಡ ಇಷ್ಟಪಡುತ್ತಾಳೆ. ಈಗಲೂ ನೋಡಿ, ಒಂದು ತೆಳು ಸೀರೆಯನ್ನು ಮಾತ್ರ ಅವಳ ದೇಹಕ್ಕೆ ಸುತ್ತಿ ತಂದಿದ್ದೇವೆ. ಇದು ಅವಳ ಹತ್ತನೇ ಗರ್ಭಾವಸ್ಥೆ. ನಮಗೆ ಗೊತ್ತಿರುವ ಎಲ್ಲ ಸ್ತ್ರೀ ರೋಗಗಳ ತಜ್ಞರಿಂದ ಒಂಬತ್ತು ಬಾರಿ ಚಿಕಿತ್ಸೆ ಕೊಡಿಸಿದ್ದೇವೆ. ಈಕೆ ಯಾಕೆ ಹೀಗೆ ಮಾಡುತ್ತಿದ್ದಾಳೆ ಎಂಬುದಕ್ಕೆ ಯಾವುದೇ. ಕಾರಣ ಈವರೆಗೆ ಗೊತ್ತಾಗಿಲ್ಲ" ಎಂದರು. ಇಂಥ ವಿಚಿತ್ರ ಸಮಸ್ಯೆಯನ್ನಿಟ್ಟುಕೊಂಡು ಚಿಕಿತ್ಸೆ ಬಯಸಿ ನನ್ನಲ್ಲಿಗೆ ಬಂದಿದ್ದರು. ನನಗೂ ಈ ಕೇಸ್ ತೆಗೆದುಕೊಳ್ಳುವ ಉತ್ಸಾಹ ಇರಲಿಲ್ಲ. ಆದರೂ ತಕ್ಷಣ ಮೂರು ದಿನಕ್ಕೆ ಔಷಧಿ ಕೊಟ್ಟು ಇನ್ನೊಮ್ಮೆ